

‘ಮಾಮು ಇದಾನಾ?’

ಬಾಗಿಲಿನಾಚೆ ಅಂಗಳದಲ್ಲಿ ಮುನ್ನಿಯ ದನಿ ಕೇಳುತ್ತಿದ್ದಂತೆಯೇ ಧಿಗ್ಗನೆದ್ದು ಕುಳಿತ ಮುನೀರ. ಸೆಕೆಗೆ ಸೋತು, ಹಾಲ್‌ನ ನಟ್ಟನಡುವೆ ನೆಲದ ಮೇಲೆ ಮಲಗಿದ್ದವನ ಮೇಲೆ ತಂಪಾದ ಗಾಳಿಯನ್ನೆರಚುತ್ತಾ ತಿರುಗುತ್ತಿತ್ತು ಫ್ಯಾನು. ಇಳಿಯುತ್ತಿದ್ದ ಸೂರ್ಯನ ಬೆಳಕು ಕಿಟಕಿಯಾಚೆಗಿನ ಧರೆಯ ಮೇಲೆ ಬಿಸಿಲಿನ ಕೋಲುಗಳ ಸೃಷ್ಟಿಸಿತ್ತು. ಸಮಯ, ಕರಗಿದ್ದಕ್ಕಿಂತ ಉಳಿದಿದ್ದನ್ನು ನೆನಪಿಸುತ್ತಾ ಹೆದರಿಸುವ ಮೇಣದ ಬತ್ತಿಯಂತೆ ಕಳೆಯುತ್ತಿತ್ತು. ಮಧ್ಯಾಹ್ನ ಊಟ ಮಾಡುವುದೇ ತಡ, ದೇಹ ಕೊನೆಯ ನಿಲ್ದಾಣ ತಲುಪಿದ ಬಸ್ಸಿನಂತೆ ದಣಿದು ಆಘಾಗಿ ನೆಲಕ್ಕುರುಳುತ್ತದೆ. ಹಾಸಿಗೆಯೇ ಆಗಬೇಕೆಂದೇನೂ ಇಲ್ಲ, ಹಾಲ್‌ನ ಬರೀ ನೆಲವಾದರೂ ಸರಿ, ಪಣತ ಕೊಟ್ಟಿಗೆಯ ಸಗಣಿ ಬಳಿದ ಮಣ್ಣಿನ ನೆಲವಾದರೂ ಸರಿ, ಮನೆಯ ಹಿಂದಿನ ಮಾವಿನ ಮರದ ನೆರಳಾದರೂ ಸರಿ... ದೇಹ ಚಾಚಿದೊಡನೆ ನಿದ್ರೆ ಬರುತ್ತದೆ. ನಿದ್ರೆಯಾದರೂ ಎಂಥಾ ನಿದ್ರೆ? ರಾತ್ರಿಯಷ್ಟೇ ಗಾಢವಾಗಿ ಕನಸು ಬೀಳುವ ನಿದ್ರೆ! ಮಲಗುವ ಮುನ್ನ ಯೂಟ್ಯೂಬಿನಲ್ಲಿ ನೋಡಿದ ಸಮುದ್ರ, ಜ್ವಾಲಾಮುಖಿ, ಐಸ್ಕ್ರೀಮ್ ತಯಾರಿಕೆ ಮುಂತಾದ ಎಂತೆಂಥದೋ ದೃಶ್ಯಗಳೆಲ್ಲ ಒಂದರೊಳಗೊಂದು ಕಲಸಿಹೋದ ವಿಚಿತ್ರವಾದ ಕನಸುಗಳು ಬೀಳುವ ನಿದ್ರೆ! ಆ ನಿದ್ರೆ ಸುಖಕರವಾಗಿರುವ ಹೊತ್ತಿಗೇ ಒಂಥರಾ ಯಾತನಾಮಯವೂ ಆಗಿರುವಂತೆ ಮುನೀರನಿಗೆ ಭಾಸವಾಗುತ್ತಿತ್ತು. ನಿದ್ರಿಸಿ ಎದ್ದೊಡನೆ ಅಮೂಲ್ಯವಾದುದೇನನ್ನೋ ತಾನು ಕಳೆದುಕೊಂಡೆ ಎನ್ನುವಂತೆ ಪಶ್ಚಾತ್ತಾಪವಾಗುತ್ತಿತ್ತು. ಮಲಗಿದಲ್ಲೇ ಒಣಗಿದ ಬಾಯಿಗೆ ಎದ್ದೊಡನೆಯೇ ಏನಾದರೂ ರುಚಿ ರುಚಿಯಾಗಿ ತಿನ್ನಬೇಕು ಎನ್ನಿಸಿ, ಅಡುಗೆ